ಗೊಬ್ಬರವನ್ನು ಖರೀದಿಸಲು ಅನುಕೂಲವಾಗುವಂತೆ ಆ ಸಮಯದಲ್ಲಿ ಪಾವತಿಸುವುದಾಗಿ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 22.1.2011ರ ಪತ್ರದಲ್ಲಿ ತಿಳಿಸಿರುತ್ತಾರೆ.

ಆ) ಕಬ್ಬಿನ ಬೆಲೆ ನಿಗದಿಪಡಿಸುವುದು ಹಾಗೂ ಕಬ್ಬು ಬಿಲ್ ಪಾವತಿ ಮಾಡುವ ವಿಷಯದಲ್ಲಿ ರೈತರನ್ನು ಕರೆಸಿ ಸಂವಾದ ನಡೆಸಿ ಕಾರ್ಖಾನೆ ಹಾಗೂ ರೈತರ ಹಿತವನ್ನು ಗಮನದಲ್ಲಿರಿಸಿಕೊಂಡು ತಾಲ್ಲೂಕು, ಜಿಲ್ಲೆಯ ಇತರೆ ಕಾರ್ಖಾನೆಗಳು ನೀಡುತ್ತಿರುವ ಬೆಲೆಯನ್ನು ಹಾಗೂ ಸಕ್ಕರೆ ಇಳುವರಿಯನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿಗದಿಗೊಳಿಸಿ ಕಬ್ಬು (ನಿಯಂತ್ರಣ) ಕಾಯ್ದೆ 1966ರಂತೆ ಕ್ರಮ ವಹಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರು ಸೂಚಿಸಿರುತ್ತಾರೆ.

ಕೃಷಿ ವಿ.ವಿ.ಗೆ ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ

272 (429) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನ ಜವಳಗೇರಾ ಗ್ರಾಮದ ಹತ್ತಿರವಿರುವ ಸಿ.ಎಸ್.ಎಫ್. ಭೂಮಿಯನ್ನು ರಾಯಚೂರು ಕೃಷಿ ವಿ.ವಿ.ಗೆ ಸ್ವಾಧೀನ ಪಡಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಭೂಮಿಯನ್ನು ಯಾವಾಗ ಸ್ವಾಧೀನ ಪಡಿಸಿಕೊಳ್ಳಲಾಗುವುದು ;

ಇ) ಈ ಭೂಮಿಯಲ್ಲಿ ಕೃಷಿ ವಿ.ವಿ.ಯ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ ;

ಈ) ಹಾಗಿದ್ದಲ್ಲಿ, ಸದರಿ ಕಟ್ಟಡದ ಕಾಮಗಾರಿಯು ಯಾವ ಹಂತದಲ್ಲಿದೆ ;

ಉ) ಕೃಷಿ ವಿ.ವಿ.ಯನ್ನು ಪ್ರಾರಂಭಿಸಲು ಸರ್ಕಾರ ಈವರೆವಿಗೂ ನೀಡಿರುವ ಅನುದಾನದ ಮೊತ್ತವೆಷ್ಟು; (ಪೂರ್ಣ ವಿವರಗಳನ್ನು ನೀಡುವುದು)

ಊ) ಕೃಷಿ ವಿ.ವಿ.ಯನ್ನು ಪ್ರಾರಂಭಿಸಲು ಸರ್ಕಾರ ನಿಗದಿಪಡಿಸಿದ್ದ ಅನುದಾನದ ಮೊತ್ತವೆಷ್ಟು ; (ಪೂರ್ಣ ವಿವರಗಳನ್ನು ನೀಡುವುದು) ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ರಾಯಚೂರಿನಲ್ಲಿ ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯವು ದಿನಾಂಕ: 22.11.2008ರ ಅಧ್ಯಾದೇಶ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 2009ರಂತೆ ಅಸ್ಥಿತ್ವಕ್ಕೆ ಬಂದಿದೆ. 2009–10 ಮತ್ತು 2010–11ನೇ ಸಾಲುಗಳಲ್ಲಿ ಈ ಕೃಷಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳೆಂದರೆ:

	2009–10	**2010–11**
ಯೋಜನೆ	800 ಲಕ್ಷ ರೂ.	1675 ಲಕ್ಷ ರೂ.
ಯೋಜನೇತರ	1465 ಲಕ್ಷ ರೂ.	2000 ಲಕ್ಷ ರೂ.